ಈ ಕಾಲದವು ಎಂಥತವ್ವೋ ಜ್ವರಗಳು, ಅಯ್ಯೋ ಪಾಪ ಕಷ್ಟ ಜೀವಿ. ಅವಳಿಗೆ ಹಾಗಾಗಿರಬಾರದು, ಹೆಣ್ಣೆಂಗ್ಸು. ಮತ್ತೊಮ್ಮೆ ಅದಕ್ಕೂ ಮೀರಿ ಅವರ ಮನೆಯಲ್ಲಿ ಯಾವುದಾದರೂ ಸಾವು ನೋವು ಸಂಭವಿಸಿರಬಹುದೇ? ಹಾಗೇನಾದರೂ ಆಗಿದ್ದರೆ ಅವಳು ಅದರಿಂದ ಚೇತರಿಸಿಕೊಂಡು ಮತ್ತೆ ಯಥಾ ಸ್ಥಿತಿಗೆ ಮರಳಲು ಹಲವು ವಾರಗಳೇ ಉರುಳುತ್ತವೆ... ಹೀಗೆ ತನಗೆ ಅನಿವಾರ್ಯವಾದ ಕೆಲಸದಾಕೆ ಬಾರದಿರುವುದಕ್ಕೆ ಸಾವಿತ್ರಿಯ ಮನಸ್ಸು ಒಂದರೆಗಳಿಗೆಯಲ್ಲೇ ಎಲ್ಲಾ ಥರಹದ ಸಂಭವನೀಯತೆಯನ್ನೂ ಯೋಚಿಸಿಬಿಟ್ಟಿತು.

ಈ ಮಧ್ಯೆ ಆಚೆ ಯಾರೆ ಸರಿದಾಡಿದರೂ, 'ಅಗೋ ಶಿವಮ್ಮ ಈಗ ಬಂದಾಳು' ಎಂದು ಅತ್ತ ಕಡೆಯೇ ಗ್ಯಾನ. ಮಕ್ಕಳಿಗೆ ಜಾಮೂನಿರಲಿ ಅಸಲಿಗೆ ಅಂದು ಸಾವಿತ್ರಿ ರಾತ್ರಿ ಎಂಟಾದರೂ ಮೇಲೇಳಲೇ ಇಲ್ಲ. ದೂರದೂರಿಗೆ ಕೆಲಸದ ಮೇಲೋಗಿದ್ದ ಗಂಡ ಬಂದವನು ಸಾವಿತ್ರಿಯ ಅವಸ್ಥೆ ನೋಡಿ ರಾತ್ರಿ ಊಟಕ್ಕೆ ಹೋಟೆಲ್‌ಗೆ ಕರೆದುಕೊಂಡು ಹೋದ. ಯಾವುದೋ ಒತ್ತಡದಲ್ಲಿ ಶಿವಮ್ಮನಿಗೆ ಸಂಜೆ ಬರಲಿಕ್ಕಾಗಿಲ್ಲ, ಮುಂಜಾನೆಯೇ ಬಂದು ನಮ್ಮ ಮನೆಯ ಕೆಲಸ ಮುಗಿಸಿಕೊಟ್ಟೇ ಮುಂದೋಗುವಳೆಂಬ ಆಶಾವಾದದಿಂದ ತಾನು ಬೆಳಗ್ಗೆ ಇಟ್ಟೋಗಿದ್ದ ಪಾತ್ರೆಗಳಿಗೆ ಸಾವಿತ್ರಿ ಕೈ ಹಾಕಲೇ ಇಲ್ಲ. ಭರವಸೆಯಿಂದಲೇ ಮಲಗಿದಳು. ಇನ್ನ ಮುಂಜಾನೆ ಆರು ಏಳಾದರೂ ಶಿವಮ್ಮನ ಸುಳಿವು ಇತ್ತ ಸಿಗಲೇ ಇಲ್ಲ. ನೋಡಿ ನೋಡಿ ಸಾಕಾಗಿ ಸಾವಿತ್ರಿ ವಿಧಿಯಿಲ್ಲದೆ ತಾನೇ ಒಂದೆರಡು ಪಾತ್ರೆ ಬೆಳಗಿಕೊಂಡು ಮಕ್ಕಳಿಗೆ ಅವಸರಕ್ಕೆ ಪುಳಿಯೋಗರೆ ಕಲೆಸಿಕೊಟ್ಟಳು. ನೆನ್ನೆಯ ಭರವಸೆಯಿಂದಲೇ ಇನ್ನಷ್ಟು ಮುಸುರೆ ಪಾತ್ರೆಗಳನ್ನು ಮತ್ತದೇ ಜಾಗದಲ್ಲಿ ಇಟ್ಟು ಆಫೀಸಿಗೆ ಹೋದಳು. ಇಂದು ಸಂಜೆ ಬಂದು ನೋಡಿದಾಗಲೂ ಪಾತ್ರೆಗಳು ಜುಮ್ ಎಂದಿರಲಿಲ್ಲ. ಬಿದ್ದ ಜಾಗದಲ್ಲೇ ಬಿದ್ದಿದ್ದವು. ಇಂದೂ ಒಂದಷ್ಟು ಕೊರಗಿದಳಾದರೂ ನೆನ್ನೆಯಷ್ಟು ಡಿಸ್ಟರ್ಬ್ ಆಗದೆ ಮಕ್ಕಳ ಮುಖ ನೋಡಿಕೊಂಡು ಎದ್ದು ತಾನೇ ಎಲ್ಲ ಪಾತ್ರೆಗಳನ್ನು ಬೆಳಗಿ ಒಳಗೋಗಿ ಸ್ಟೌ ಹೊಚ್ಚಿದಳು.

ತನ್ನ ಮನೆಗೆಲಸದ ಮನೆ ಹಾಳಾಗಿ ಹೋಗಲಿ ಇತ್ತ ಬೆಳಗ್ಗೆ ಎಂಟು ಗಂಟೆಯ ಸುಮಾರಿಗೆ ಗಂಟೆ ಹೊಡೆದಂತೆ ಮನೆ ಮುಂದೆ ಕೈ ಬೀಸಿಕೊಂಡು ಹೋಗುತ್ತಿದ್ದ ಶಿವಮ್ಮ ಕಳೆದ ಮುನ್ನಾಲ್ಕು ದಿನದಿಂದ ಕಾಣುತ್ತಿಲ್ಲವೆಂಬ ಮತ್ತೊಂದು ಬಗೆಯ ದಿಗಿಲು ಸಾವಿತ್ರಿಯನ್ನು ಹೊಕ್ಕಲಾಗಿ... ಆತಂಕದಿಂದ ಶಿವಮ್ಮ ಬರುತ್ತಿದ್ದ ಮಾಮೂಲಿ ಟೈಮಿಗೆ ಆಚೆ ಬಂದು ಉದ್ದಕ್ಕೆ ದೃಷ್ಟಿ ಹಾಯಿಸಿ ನೋಡಿದಳು. ಸಾವಿತ್ರಿಗೆ ಆಶ್ಚರ್ಯ ಕಾದಿತ್ತು. ಅನತಿ ದೂರದಲ್ಲಿ ಶಿವಮ್ಮ ಕೈ ಬೀಸಿಕೊಂಡು ಇತ್ತಲೇ ಬರುತ್ತಿದ್ದಳು. ಸಾವಿತ್ರಿಗೆ ಹೋದ ಜೀವ ಬಂದಂತಾಯಿತು. ಮನೆಗೆಲಸಕ್ಕೆ ಇನ್ನು ಮುಂದೆ ಬರುತ್ತಾಳೊ ಇಲ್ಲವೋ ಎಂದು ಖಾತ್ರಿ ಪಡಿಸಿಕೊಳ್ಳುವ ಮುಂಚೆ ಅವಳಿಗೆ ಬಂದೊದಗಿದ ಕಷ್ಟವೇನೆಂದು ಕೇಳಬೇಕೆಂದು, ಅವಳ ಬರುವನ್ನೇ ಕಾದು ಗೇಟ್ ಬಳಿಯಲ್ಲೇ ನಿಂತಳು. ಇತ್ತಲೇ ಬರುತ್ತಿದ್ದ ಶಿವಮ್ಮ ನೋಡ ನೋಡುತ್ತಿದ್ದಂತೆಯೇ ತನ್ನ ದಾರಿಯಲ್ಲಿ ಸಿಗುವ ಅಡ್ಡ ದಾರಿಯ ಇನ್ನೊಂದು ದಿಕ್ಕಿಗೆ ನಡಿಗೆಯನ್ನು ತಟಕ್ಕನೆ ತಿರುಗಿಸಿ ಮರೆಯಾದಳು. ಸಾವಿತ್ರಿಗೆ ಇದು ಇನ್ನೂ ವಿಚಿತ್ರವೆನಿಸಿತು. ಯಾಕಿರಬಹುದೆಂದು ತಲೆಗೆ ಹುಳ ಬಿಟ್ಟುಕೊಂಡಳಾದರೂ ಉತ್ತರ ಮಾತ್ರ ಸಿಗಲೇ ಇಲ್ಲ. ಮಾರನೇ ದಿನವೂ ಹೀಗೇ ಆದಾಗ... ಶಿವಮ್ಮಳಿಗೆ ಏನೂ ಆಗಿಲ್ಲ, ಅವಳು ಬೇಕಂತಲೆ ದಿಕ್ಕು ಬದಲಾಯಿಸಿಕೊಂಡಿದ್ದಾಳೆಂಬುದು ಖಾತ್ರಿಯಾಗಿ... ಈ ಬಗ್ಗೆ ಗಂಡನ ಬಳಿ ವಿಚಾರಿಸಿದಾಗ, 'ಹೆ... ಎಲ್ಲೊ ಅವಳಿಗೆ ದುಡ್ಡು ಕಡಿಮೆಯಾಯಿತೆನಿಸಿರಬೇಕು, ಅದಕ್ಕೆ ತಪ್ಪಿಸಿಕೊಂಡು ತಿರುಗುತ್ತಿದ್ದಾಳೆ, ಹೋಗಲಿ ಬಿಡು' ಎಂದು ಸಮಾಧಾನಿಸಿದ.

ಇನ್ನು ಸಾವಿತ್ರಿ ಇದನ್ನೆಲ್ಲ ಮರೆತು ಸುಮ್ಮನಿರಲು ಎಷ್ಟೇ ಪ್ರಯತ್ನ ಪಟ್ಟರೂ ಅದೇ ಬೆಳಗಿನ ಎಂಟರ ಸುಮಾರಿಗೆ ಅವಳ ಹೆಜ್ಜೆಗಳು ಆಚೆ ಬಂದು ಶಿವಮ್ಮಳ ದಿಕ್ಕಿಗೆ ಒಂದು ಓರೆ ನೋಟ ಬೀರುವುದು ತಪ್ಪಿರಲಿಲ್ಲ, ಅಂತೆಯೇ ಅವಳು ದಿಕ್ಕು ಬದಲಾಯಿಸಿ ಹೋಗುವುದೂ ನಿಂತಿರಲಿಲ್ಲ.